"ನಿಮ್ಮ ಬುದ್ಧಿವಂತಿಕೆಗೆ ಮತ್ತು ಚುರುಕಾದ ಕೆಲಸಕ್ಕೆ ನಾನು ನಿಮಗೆ ಅಭಿನಂದನೆ ಸಲ್ಲಿಸ್ತಿದ್ದೇನೆ, ಮೇಡಂ."

"ಹಾಂ! ನಿನಗೆ ನಿನ್ನ ಟ್ರ್ಯಾಕ್ಸ್ ಕಾಯುತ್ತಿದೆಯಲ್ಲವೇ? ನಾನು ಮತ್ತೇನು ಮಾಡಬೇಕಿತ್ತು?"

"ಮೇಡಂ, ನೀವು ಸೌಜನ್ಯಶೀಲರು. ನೀವು ಸ್ವಲ್ಪ ಸಮಯ ಲಂಡನ್‌ನಲ್ಲಿಯೇ ಇರ್ತೀರಾ?"

"ನಿನಗೆ ಹಣ ಕೊಡೋದಿಕ್ಕಿದೆಂತ ನನಗೇನೂ ಭಯವಿಲ್ಲ."

"ನಮ್ಮನ್ನು ಕ್ಷಮಿಸಿ."

"ನಾವು ಇನ್ನೊಮ್ಮೆ ಎಲ್ಲಿಯಾದರೂ ಭೇಟಿಯಾಗೋಣ."

"ನಾನು ಅದನ್ನೇ ಹೇಳಬಯಸುತ್ತೇನೆ."

"ಮತ್ತೆ ನಾನು... ಇಲ್ಲ" ಕೌಂಟೆಸ್ ನಗುತ್ತಲೇ ನಿರಾಕರಣೆಯ ಮಾತು ಹೇಳಿದಳು, "ನಾನು ನಿನಗೆ ದೊಡ್ಡ ಆರೋಪ ಹೊರಿಸಬೇಕಾದಿತು... ನಾನು ಈ ಜಗತ್ತಿನಲ್ಲಿ ಕೆಲವೇ ಕೆಲವು ಗಂಡಸರಿಗೆ ಹೆದರುವವಳು. ಗುಡ್‌ಬೈ ಮಿಸ್ಟರ್ ಪೈರೆಟ್."

"ಗುಡ್‌ಬೈ ಕೌಂಟೆಸ್, ಕ್ಷಮಿಸಿ ನನ್ನ. ಹಾಂ! ಅಂದ ಹಾಗೆ ನಿಮ್ಮ ಸಿಗರೇಟ್ ಪೆಟ್ಟಿಗೆಯನ್ನು ಹಿಂತಿರುಗಿಸುವುದಕ್ಕೆ ಮರೆತು ಬಿಟ್ಟೆ."

ಪೈರೆಟ್ ತುಸು ಬಾಗಿ ಗೌರವಯುತವಾಗಿ ನಮಗೆ ತಿಜೋರಿಯಲ್ಲಿ ದೊರೆತ ಕಪ್ಪು ಸಿಗರೇಟ್ ಪೆಟ್ಟಿಗೆಯನ್ನು ಅವಳಿಗೆ ನೀಡಿದ. ಮುಖದಲ್ಲಿ ಯಾವುದೇ ರೀತಿಯ ಭಾವನೆಗಳಿಲ್ಲದೆ ಅದನ್ನು ತೆಗೆದುಕೊಂಡಳು. ತಕ್ಷಣ ಹುಬ್ಬುಗಳನ್ನು ಏರಿಸಿ ವಟಗುಟ್ಟಿದಳು, "ಹಾಗೋ!"

★★★

"ಎಂತಹ ಹೆಂಗಸು?" ಮೆಟ್ಟಿಲು ಇಳಿಯುವಾಗ ಪೈರೆಟ್ ಕಿರುಚಿದ, "ಒಂದೇ ಒಂದು ವಾದ ಮಾಡ್ಲಿಲ್ಲ. ಒಂದೇ ನೋಟದಲ್ಲಿ ಮುಗಿಸಿದ್ದಾಳೆ. ಸರಿಯಾದ ರೀತಿಯಲ್ಲಿ ಸ್ಪಂದಿಸಿದ್ದಾಳೆ. ಹೇಸ್ಟಿಂಗ್, ನಾನು ನಿನಗೆ ಹೇಳ್ತೇನೆ... ಹೆಂಗಸೊಬ್ಬಳು ಈ ರೀತಿ ತಾತ್ಸಾರದ ಮುಗುಳ್ನಗುವಿನಲ್ಲಿ ಸೋಲನ್ನು ಒಪ್ಪಿಕೊಂಡದ್ದು ಆಶ್ಚರ್ಯ. ಆದಷ್ಟು ಬೇಗ ದೂರ ಹೋಗುವ. ಅವಳು ಅಪಾಯಕಾರಿ ಹೆಣ್ಣು, ಉಕ್ಕಿನಂತಹ ಕೈಗಳು... ಅವಳು..." ಅವನು ಹಾರುಗಾಲಿನಲ್ಲಿ ನಡೆದ.

"ನೀನು ಎಲ್ಲಿಗೆ ಹೋಗ್ಬೇಕೂಂತ ನಿರ್ಧರಿಸಿದ್ದೀಯಾ? ನಿನ್ನ ವಾಹನವನ್ನು ಬೇಗ ಚಾಲೂ ಮಾಡು" ಎಂದ ನಾನು, "ನೀನು ಕೌಂಟೆಸ್‌ಳನ್ನು ಮೊದಲು ಯಾವಾಗ ಸಂದೇಹಪಟ್ಟೆ?" ಎಂದು ಕೇಳಿದೆ.

"ಗೆಳೆಯಾ, ಅದು ಕೈಗವಸು ಮತ್ತು ಸಿಗರೇಟ್ ಪೆಟ್ಟಿಗೆಗಳ ಕೇಸ್‌ನಲ್ಲಿ... ಜೋಡಿ ಸುಳಿವು... ಅದೇ ನನ್ನನ್ನು ಆಲೋಚಿಸುವಂತೆ ಮಾಡಿತು. ಬರ್ನಾರ್ಡ್ ಪಾರ್ಕರ್ ಸುಲಭದಲ್ಲಿ ಒಂದು ಅಥವಾ ಇನ್ನೊಂದನ್ನು ಬಿಟ್ಟಿರಬಹುದು ಅಥವಾ ಎರಡನ್ನೂ. ಇಲ್ಲ! ಅದು ತುಂಬಾ ಅಜಾಗರೂಕತೆ ಅನಿಸ್ತಿತ್ತು. ಅದೇ ರೀತಿ ಬೇರೆ ಯಾರಾದರೂ ಪಾರ್ಕರ್‌ನನ್ನು ಅಪರಾಧಿಯನ್ನಾಗಿಸಲು ಬಳಸಿಕೊಂಡಿದ್ದರೆ ಯಾವುದಾದರೊಂದು ವಸ್ತು ಸಾಕಿತ್ತು. ಸಿಗರೇಟ್ ಪೆಟ್ಟಿಗೆ ಅಥವಾ ಕೈಗವಸು... ಎರಡೂ ಬೇಕಾಗಿರಲಿಲ್ಲ. ಆಗ ನಾನು ಈ ನಿರ್ಧಾರಕ್ಕೆ ಬರಬೇಕಾಯಿತು. ಈ ಎರಡು ವಸ್ತುಗಳಲ್ಲಿ ಒಂದು ಪಾರ್ಕರ್‌ನದ್ದು ಅಲ್ಲಾಂತ. ಮೊದಲಿಗೆ ನಾನಂದುಕೊಂಡದ್ದು ಸಿಗರೇಟ್ ಪೆಟ್ಟಿಗೆ ಆತನದ್ದು ಮತ್ತು ಕೈಗವಸು ಅವನದ್ದಲ್ಲಾಂತ. ಆದರೆ ನಾನು ಕೈಗವಸು ಯಾರದೆಂದು ತಿಳಿದುಕೊಂಡಾಗ ಬೇರೆ ರೀತಿಯಲ್ಲಿ ಆಲೋಚಿಸಿದೆ. ಹಾಗಾದರೆ ಈ ಸಿಗರೇಟ್ ಪೆಟ್ಟಿಗೆ ಯಾರದ್ದು? ಸ್ಪಷ್ಟವಾಯಿತು. ಅದು ಲೇಡಿ ರನ್‌ಕಾರ್ನರ್‌ಳದ್ದೂಂತ. ಆದರೆ ಅದರಲ್ಲಿದ್ದ ಅಕ್ಷರಗಳು ತಪ್ಪಾಗಿವೆ. ಅದು ಮಿಸ್ಟರ್ ಜಾನ್‌ಸ್ಟನ್‌ನದ್ದೇ? ಅವನು ತನ್ನ ನಿಜವಾದ ಹೆಸರನ್ನು ಮರೆಮಾಚಿದ್ದಾನೆಯೇ? ನಾನು ಅವನ ಕಾರ್ಯದರ್ಶಿಯನ್ನು ಭೇಟಿಯಾಗಿದ್ದೆನಲ್ಲ. ಆಗ ಎಲ್ಲವೂ ಸ್ಪಷ್ಟವಾಯಿತು. ಇದರಲ್ಲಿ ಜಾನ್‌ಸ್ಟನ್‌ನ